KACM010011242024

Presented on : 23-04-2024
Registered on : 23-04-2024

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAVINDRA HEGDE)**
**S.C (SESSION CASES)/42/2024**

Complainant(PROSECUTION):
State by Sakharayapatna Police Station, Rep. by Public Prosecutor, Chikkamagaluru

**VERSUS**

Accused: Vaggaiah, S/o Late Ningaiah, 50 yrs, Painter, R/o Banuru Village, Kadur Taluk, Chikkamagaluru Dist.

---------------------------------------------------------------------------

State Complainant}: Public Prosecutor, Chikkamagaluru,
Advocate for accused: P.E. SURESH

---------------------------------------------------------------------------

**Offence punishable under : 302 of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 42/2024

| | | |
|---|---|---|
| ಸಾಕ್ಷಿದಾರರ ಹೆಸರು | - ಸುನೀಲ್ ಆರ್ | ಪಿಡಬ್ಲೂ -1 |
| ತಂದೆಯ ಹೆಸರು | - ರವಿನಾಯಕ್ | ಸಿಡಬ್ಲೂ - 1 |
| ವಯಸ್ಸು | - 32 ವರ್ಷ | |
| ಉದ್ಯೋಗ | - ಫೈರ್ ಮ್ಯಾನ್ | |
| ವಾಸ ಸ್ಥಳ | - ಪ್ರಸ್ತುತ ಶಿವಮೊಗ್ಗ | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ jitsi app ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 01.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಗೌರಿಬಾಯಿ ನನ್ನ ತಾಯಿ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು, ಆತ ಬಾಣೂರಿನ ವಾಸಿ ಮತ್ತು ನನ್ನ ತಂದೆಯ ಸ್ನೇಹಿತ. ನನ್ನ ತಂದೆ 2016 ನೇ ಇಸವಿಯಲ್ಲಿ ಮೃತಪಟ್ಟಿದ್ದಾರೆ . ಅಂದಿನಿಂದ ಆರೋಪಿ ನಮ್ಮ ಜಮೀನಿನ ಕೆಲಸಗಳನ್ನು ನೋಡಿಕೊಳ್ಳುತ್ತಾ ನಮ್ಮ ಮನೆಗೆ ಆಗ್ಗಾಗ್ಗೆ ಬಂದು ಹೋಗಿ ಮಾಡುತ್ತಿದ್ದನು. ಚಾಸಾ.14 ನನ್ನ ಅಜ್ಜಿ. ಚಾಸಾ.15 ಮತ್ತು ಚಾಸಾ.18 ನನ್ನ ಅಕ್ಕಂದಿರು. ಚಾಸಾ.16 ನನಗೆ ಅತ್ತೆಯಾಗಬೇಕು. ಚಾಸಾ.19 ನನ್ನ ಭಾವ.

2. ನಮ್ಮ ತಂದೆ ತಾಯಿಗೆ ಒಟ್ಟು ಮೂರು ಜನ ಮಕ್ಕಳು. ಅವರೆಂದರೆ ಚಾಸಾ.15, ಚಾಸಾ.18 ಮತ್ತು ನಾನು. ನನಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ನಾನು ಬೆಂಗಳೂರಿನಲ್ಲಿ 2017 ನೇ ಇಸವಿಯಿಂದ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯಲ್ಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದೇನು. ನನ್ನ ತಂದೆ 2016 ನೇ ಇಸವಿಯಲ್ಲಿ ಮೃತಪಟ್ಟಿದ್ದರು. ನನ್ನ ತಾಯಿ ಚಟ್ನಪಾಳ್ಯ ಗೇಟಿನಲ್ಲಿರುವ ನಮ್ಮ ಜಮೀನನ್ನು ನೋಡಿಕೊಂಡು ಅಗ್ರಹಾರ ತಾಂಡ್ಯದಲ್ಲಿರುವ ನಮ್ಮ ಮನೆಯಲ್ಲಿ ವಾಸವಾಗಿದ್ದರು. ಆರೋಪಿ ನನ್ನ ತಂದೆಯ ಸ್ನೇಹಿತನಾಗಿದ್ದು, ನನ್ನ ತಾಯಿಗೆ ಜಮೀನನ್ನು ನೋಡಿಕೊಳ್ಳಲು ಸಹಾಯ ಮಾಡಿಕೊಂಡು ನಮ್ಮ ಮನೆಗೆ ಆಗಾಗ್ಗೆ ಬಂದು ಹೋಗಿ ಮಾಡುತ್ತಿದ್ದನು.

3. ದಿನಾಂಕ 14.01.2024 ರಂದು ಬೆಳಿಗ್ಗೆ ಸುಮಾರು 6.30 ಗಂಟೆಗೆ ನನ್ನ ಅಜ್ಜಿಯಾದ ಚಾಸಾ.14 ಸಕ್ರಿಬಾಯಿ ರವರು ನನಗೆ ಫೋನ್ ಮಾಡಿ ಹಿಂದಿನ ದಿನ ರಾತ್ರಿ 10.30 ಗಂಟೆ ಸುಮಾರಿಗೆ ಆರೋಪಿ ಮತ್ತು ನಿಮ್ಮ ತಾಯಿ ಗಲಾಟೆ ಮಾಡಿಕೊಳ್ಳುತ್ತಿದ್ದಾಗಿ ಮತ್ತು ಅವರು ಆಂಜನೇಯ ಸ್ವಾಮಿ ದೇವಸ್ಥಾನದ ಕಡೆಗೆ ಹೋಗಿದ್ದಾಗಿ ನಂತರ ಬೆಳಿಗ್ಗೆ ನೋಡಿದಾಗ ನನ್ನ ತಾಯಿಯನ್ನು ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಆರೋಪಿ ಕೊಲೆ ಮಾಡಿರುವುದಾಗಿ ತಿಳಿಸಿದರು.

4. ನಂತರ ನಾನು ಸದರಿ ವಿಚಾರವನ್ನು ಚಾಸಾ.15 ಮತ್ತು ಚಾಸಾ.18 ರವರಿಗೆ ತಿಳಿಸಿದೆನು. ಆ ಸಮಯದಲ್ಲಿ ಚಾಸಾ.15 ರವರು ಬೆಂಗಳೂರಿನಲ್ಲಿಯೇ ವಾಸವಾಗಿದ್ದರು. ಹಾಗಾಗಿ ನಾನು ಚಾಸಾ.15 ರವರನ್ನು ಕರೆದುಕೊಂಡು ಅಗ್ರಹಾರ ತಾಂಡ್ಯಕ್ಕೆ ಹೋದೆನು. ಅಲ್ಲಿಂದ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಹೋಗಿ ನೋಡಿದಾಗ ಅಲ್ಲಿ ನನ್ನ ತಾಯಿ ಮೃತಪಟ್ಟಿದ್ದರು. ಆಕೆಯ ಶವ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇತ್ತು. ನಾನು ಅಲ್ಲಿಗೆ ಹೋದಾಗ ಬೆಳಿಗ್ಗೆ ಸುಮಾರು 11.00 ರಿಂದ 11.30 ಗಂಟೆಯಾಗಿತ್ತು. ನನ್ನ ತಾಯಿಯ ತಲೆಯ ಹಿಂಭಾಗದಲ್ಲಿ ತೀವ್ರವಾದ ಗಾಯವಾಗಿ ರಕ್ತ ಬಂದು ಹೆಪ್ಪುಗಟ್ಟಿತ್ತು. ಆಕೆಯ ಬೆನ್ನು ಮತ್ತು ಕೈ ಕಾಲುಗಳಲ್ಲಿ ಗಾಯವಾಗಿ ರಕ್ತ ಬಂದಿರುವುದು ಕಂಡು ಬಂತು.

5. ನಂತರ ಚಾಸಾ.19 ರವರು ನನ್ನ ಬಳಿ ಬಂದು ಹಿಂದಿನ ದಿನ ರಾತ್ರಿ ಆತ ಚಟ್ನಪಾಳ್ಯ ಸಮೀಪವಿರುವ ನಮ್ಮ ಅಡಿಕೆ ತೋಟಕ್ಕೆ ಹೋಗುವಾಗ ಊರಿನವರು ಆತನಿಗೆ ಫೋನ್ ಮಾಡಿ ಅಗ್ರಹಾರ ತಾಂಡ್ಯದಲ್ಲಿ ಆರೋಪಿ ಮತ್ತು ನಿಮ್ಮ ಅತ್ತೆ ಅಂದರೆ ನನ್ನ ತಾಯಿ ಜಗಳ ಮಾಡಿಕೊಳ್ಳುತ್ತಿದ್ದಾಗಿ ತಿಳಿಸಿದ್ದಾಗಿ ನಂತರ ಸದರಿ ವಿಚಾರವನ್ನು ಕೇಳಿ ಆತ ರಾತ್ರಿ ಸುಮಾರು 10.30 ಗಂಟೆಗೆ ಆತ ನನ್ನ ತಾಯಿಯನ್ನು ಮಾತನಾಡಿಸಲು ಆಕೆಯ ಮನೆಗೆ ಹೋದಾಗ ಅಲ್ಲಿ ನನ್ನ ತಾಯಿ ಇರಲಿಲ್ಲವೆಂದು ಅಕ್ಕಪಕ್ಕದವರನ್ನು ವಿಚಾರಿಸಿದಾಗ ಆಕೆ ಮತ್ತು ಆರೋಪಿ ಜಗಳವಾಡುತ್ತಾ ನಾಗೇನಹಳ್ಳಿಯ ಕಡೆಗೆ ನಡೆದುಕೊಂಡು ಹೋದರು ಎಂದು ತಿಳಿಸಿದ್ದಾಗಿ ನಂತರ ಆತ ಬೈಕಿನಲ್ಲಿ ನಾಗೇನಹಳ್ಳಿಯ ಕಡೆಗೆ ಹೋಗಿ ನೋಡಿದಾಗ ಆತನಿಗೆ ನನ್ನ ತಾಯಿ ಕಾಣಲಿಲ್ಲವೆಂದು ಆಗ ಆತ ನನ್ನ ತಾಯಿ ಅಲ್ಲಿಯೇ ದೇವಸ್ಥಾನದ ಹತ್ತಿರವಿದ್ದ ಆಕೆಯ ಅಕ್ಕನ ಮನೆಗೆ ಹೋಗಿರಬಹುದೆಂದು ತಿಳಿದು ಆತ ತನ್ನ ಜಮೀನಿನ ಹತ್ತಿರ ವಾಪಾಸ್ಸು ಹೋಗಿದ್ದಾಗಿ ತಿಳಿಸಿದರು.

6. ನನ್ನ ತಾಯಿ ಮೃತಪಡುವ 1 ವರ್ಷದ ಹಿಂದೆ ಆಕೆ ಬಿದ್ದು ಪೆಟ್ಟು ಮಾಡಿಕೊಂಡಿದ್ದರು. ಹಾಗಾಗಿ ಆಕೆಗೆ ಕೆಲಸಕ್ಕೆ ಹೋಗಲು ಆಗುತ್ತಿರಲಿಲ್ಲ ಆದ್ದರಿಂದ ಮನೆಯ ಖರ್ಚಿಗಾಗಿ ಆಕೆ ಆರೋಪಿಯಿಂದ ರೂ.4,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದಾಗಿ ಸದರಿ ಹಣವನ್ನು ವಸೂಲಿ ಮಾಡುವ ಸಲುವಾಗಿ ಆರೋಪಿ

ಆಗಾಗ್ಗೆ ನಮ್ಮ ಮನೆಗೆ ಬಂದು ನನ್ನ ತಾಯಿಯೊಂದಿಗೆ ಗಲಾಟೆ ಮಾಡುತ್ತಿದ್ದುದ್ದಾಗಿ ನನ್ನ ತಾಯಿ ಮತ್ತು ನಮ್ಮ ಅಕ್ಕಪಕ್ಕದ ಮನೆಯವರು ನನಗೆ ತಿಳಿಸಿದ್ದರು.

7. ಅದೇ ವಿಚಾರದಲ್ಲಿ ಆರೋಪಿ ನನ್ನ ತಾಯಿಯನ್ನು ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಕರೆದುಕೊಂಡು ಹೋಗಿ ಯಾವುದೋ ಆಯುಧದಿಂದ ಹೊಡೆದು ಕೊಲೆ ಮಾಡಿರುವುದಾಗಿ ತಿಳಿಸಿ ಆತನ ವಿರುದ್ಧ ಕ್ರಮ ಜರುಗಿಸುವಂತೆ ಅದೇ ದಿನ ಅಂದರೆ ದಿನಾಂಕ 14.01.2024 ರಂದು ಮಧ್ಯಾಹ್ನ 12.00 ಗಂಟೆಗೆ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ.

8. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಪೊಲೀಸರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದರ ಪ್ರತಿಯನ್ನು ನನಗೆ ನೀಡಿರುತ್ತಾರೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

9. ಸಾಕ್ಷಿಗೆ ಆರು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ತಾಯಿ ಗೌರಿಬಾಯಿಯ ಶವ ಮತ್ತು ಆಕೆಯ ತಲೆ ಮತ್ತು ಬೆನ್ನಿನಲ್ಲಿ ಆದ ಗಾಯಗಳು ಕಂಡು ಬರುವುದಾಗಿ ಮತ್ತು ಅದು ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ.3 ರಿಂದ ನಿಪಿ.8 ಎಂದು ಗುರುತಿಸಲಾಯಿತು.

10. ಅದಾದ 2 ತಿಂಗಳ ಬಳಿಕ ಅಂದರೆ ದಿನಾಂಕ 18.03.2024 ರಂದು ಕಡೂರು ವೃತ್ತ ನಿರೀಕ್ಷಕರು ನನ್ನನ್ನು ಮತ್ತು ನನ್ನ ಅಕ್ಕನಾದ ಚಾಸಾ.15 ರವರನ್ನು ತಮ್ಮ ಕಛೇರಿಗೆ ಕರೆಸಿದ್ದರು. ಅಲ್ಲಿ ಅವರು ನಮಗೆ ಮೇಲೆ ಹೇಳಿದ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಅಳವಡಿಸಲಾಗಿದ್ದ ಸಿಸಿ ಕ್ಯಾಮೆರಾದ ಫೂಟೇಜನ್ನು

ತೋರಿಸಿದರು. ಸದರಿ ಫೂಟೇಜ್ ನಲ್ಲಿ ಆರೋಪಿ ಮತ್ತು ನನ್ನ ತಾಯಿ ಓಡಾಡಿರುವ ಮತ್ತು ಆರೋಪಿ ನನ್ನ ತಾಯಿಗೆ ಹಲ್ಲೆ ಮಾಡಿರುವ ಚಿತ್ರಣವಿರುವುದು ಕಂಡು ಬಂತು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇ.ಎ.ಒ.

Sd/-
(ಭಾನುಮತಿ ಬಿ.ಸಿ)
ಸಿ/ಸಿ ಪ್ರಧಾನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ/-

ದಿನಾಂಕಃ 01.03.2025 ರಂದು ಮಧ್ಯಾಹ್ನ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

11. ಸದರಿ ಸಿಸಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿದ್ದ ಫೂಟೇಜ್ ನಲ್ಲಿ ದಿನಾಂಕ 14.01.2024 ರಂದು ರಾತ್ರಿ 10.00 ಗಂಟೆ ಆರೋಪಿ ಮತ್ತು ನನ್ನ ತಾಯಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣಕ್ಕೆ ಹೋಗಿರುವುದು ಮತ್ತು ಮದ್ಯ ರಾತ್ರಿ ಅಂದರೆ ಬೆಳಗಿನ ಜಾವ 1.07 ನಿಮಿಷದವರೆಗೆ ದೇವಸ್ಥಾನದ ಆವರಣದಲ್ಲಿ ನನ್ನ ತಾಯಿ ಮತ್ತು ಆರೋಪಿ ಇಬ್ಬರು ಕುಳಿತು ಮಾತನಾಡುತ್ತಿರುವುದು, ಆರೋಪಿ ಒಂದು ಪೈಪನ್ನು ಕಾಲಿನಿಂದ ಹೊದೆಯುತ್ತಾ ತಂದು ನನ್ನ ತಾಯಿಯ ತಲೆಗೆ, ಮೈ ಕೈಗೆ ಹಲವಾರು ಬಾರಿ ಹಲ್ಲೆ ಮಾಡಿರುವುದು, ನನ್ನ ತಾಯಿ ಹೊಡೆತಗಳನ್ನು ತಡೆಯುತ್ತಾ ನೆಲದ ಮೇಲೆ ಮಲಗಿಕೊಂಡರೂ ಸಹ ಆರೋಪಿ ಬಿಡದೇ ಪೈಪ್ ತುಂಡಾಗಿದ್ದರಿಂದ ಒಂದು ಕಬ್ಬಿಣದ ರಾಡನ್ನು ತಂದು ಆಕೆಯ ಮೇಲೆ ಹಲ್ಲೆ ಮಾಡಿರುವುದು, ಆಕೆ ತಪ್ಪಿಸಿಕೊಂಡು ಹೋದಾಗ ಆರೋಪಿ ಅಲ್ಲಿಗೂ ಹೋಗಿ ಆಕೆಯ ಮೇಲೆ ಹಲ್ಲೆ

ಮಾಡಿ, ಆಕೆಯನ್ನು ಕೊಲೆ ಮಾಡಿ ಮದ್ಯ ರಾತ್ರಿ 1.17 ಗಂಟೆಗೆ ಅಲ್ಲಿಂದ ಪರಾರಿಯಾಗಿರುವುದು ಕಂಡು ಬಂತು.

12. ಆ ಬಗ್ಗೆ ನಾನು ಪೊಲೀಸರಿಗೆ ಅದೇ ದಿನ ನನ್ನ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ. ಸದರಿ ಫೂಟೇಜನ್ನು ಈಗ ನೋಡಿದರೆ ಗುರುತಿಸುತ್ತೇನೆ.

13. ಸದರಿ ಫೂಟೇಜ್ ಇದೆ ಎಂದು ಹೇಳಲಾದ P ಎಂಬ ಅಕ್ಷರದಿಂದ ಸೀಲು ಮಾಡಲಾಗಿರುವ ಲಕೋಟೆಯಲ್ಲಿದ್ದ ಒಂದು ಪೆನ್ ಡ್ರೈವ್ ಅನ್ನು ಈ ದಿನ ಆರೋಪಿಯ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದು ಅದರಲ್ಲಿದ್ದ ಪೆನ್ ಡ್ರೈವ್ ಅನ್ನು ತಂತ್ರಜ್ಞರ ಸಹಾಯದಿಂದ ಕಂಪ್ಯೂಟರ್ ಗೆ ಅಳವಡಿಸಿ ಅದರಲ್ಲಿದ್ದ ಫೂಟೇಜನ್ನು ಸಾಕ್ಷಿಗೆ ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿ ಕಂಡು ಬರುವ ಹೆಂಗಸನ್ನು ಸಾಕ್ಷಿಯು ತನ್ನ ತಾಯಿ ಗೌರಿಬಾಯಿ ಎಂದು ಮತ್ತು ಸದರಿ ಫೂಟೇಜ್ ನಲ್ಲಿ ಕಂಡು ಬರುವ ಗಂಡಸು ಈ ಪ್ರಕರಣದ ಆರೋಪಿಯಾದ ವಗ್ಗಯ್ಯ ಎಂದು ಗುರುತಿಸಿರುತ್ತಾರೆ ಮತ್ತು ಸದರಿ ಫೂಟೇಜ್ ನಲ್ಲಿ ಆರೋಪಿ ತನ್ನ ತಾಯಿಯೊಂದಿಗೆ ಜಗಳ ಮಾಡುತ್ತಾ ಆಕೆಯ ಮೇಲೆ ಪೈಪು ಮತ್ತು ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೂಟೇಜನ್ನು ಒಳಗೊಂಡ ಪೆನ್ ಡ್ರೈವ್ ಅನ್ನು ನಿಪಿ.9 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ

(ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿಯು ತನ್ನ ವಕೀಲರನ್ನು ಬದಲಿಸುವುದಾಗಿ ಹೇಳಿ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇ.ಎ.ಒ.
Sd/-
(ಭಾನುಮತಿ ಬಿ.ಸಿ)
ಸಿ/ಸಿ ಪ್ರಧಾನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ/-

ದಿನಾಂಕಃ **04-07-2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**(Accused produced from J.C. through V.C. at the remote point of District Prison, Chikkamagaluru)**

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ವಿಸಿಯಲ್ಲಿ ಹಾಜರುಪಡಿಸಿದ್ದು, ನ್ಯಾಯಾಲಯದಿಂದ ಮಾತನಾಡುವುದು ಅಂದರೆ ಸಾಕ್ಷಿದಾರರು ಹೇಳುವುದನ್ನು ಸಹಾ ಕೇಳಿಸಿಕೊಂಡು, ಕೇಳಿಸುತ್ತಿದೆಯೇ ಎಂದು ಆರೋಪಿಗೆ ಕೇಳಲಾಗಿ ಎಲ್ಲವೂ ಕೇಳಿಸುತ್ತಿದೆ ಎಂದು ಹೇಳಿರುತ್ತಾನೆ)

ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಇ.ಎಸ್ ವಕೀಲರಿಂದಃ

14. ನಾನು ಈಗ ದಾವಣಗೆರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅದಕ್ಕೂ ಮೊದಲು ನಾನು ಶಿವಮೊಗ್ಗದಲ್ಲಿ ಕೆಲಸ ಮಾಡುತ್ತಿದ್ದೆ. ಶಿವಮೊಗ್ಗದಲ್ಲಿ ನಾನು ವಾಸವಿದ್ದ ಮನೆಯಿಂದ ನನ್ನ ತಾಯಿ ವಾಸವಿದ್ದ ಮನೆಗೆ ಬರುವುದಕ್ಕೆ ಸುಮಾರು 2 ತಾಸು ಬೇಕಾಗುತ್ತಿತ್ತು. ಬೆಂಗಳೂರಿನಿಂದ ನಮ್ಮ ಊರಿಗೆ ಅಂದರೆ ನಮ್ಮ ತಾಯಿ ವಾಸವಿದ್ದ ಊರಿಗೆ ಬರುವುದಕ್ಕೆ ಸುಮಾರು 4 ರಿಂದ 5 ತಾಸು ಹಿಡಿಯುತ್ತದೆ. ನಾನು ಬಿಬಿಎಂವರೆಗೆ ಓದಿದ್ದೇನೆ. ನಮ್ಮ ಕುಟುಂಬದಲ್ಲಿ ಸಾಕಷ್ಟು ಜನ ವಿದ್ಯಾವಂತರು ಮತ್ತು ಸಾಮಾನ್ಯ ಜ್ಞಾನ ಇರುವವರು ಇದ್ದಾರೆ ಎನ್ನುವುದು ಸರಿ. ಊರಿನಲ್ಲಿ ಆಕಸ್ಮಿಕವಾಗಿ ಸಾವಾದರೆ, ಬೆಂಕಿ ಹತ್ತಿಕೊಂಡರೆ ತಕ್ಷಣಕ್ಕೆ ಅಗ್ನಿಶಾಮಕ ದಳಕ್ಕೆ ಅಥವಾ ಪೊಲೀಸ್ ಠಾಣೆಗೆ ದೂರು ಕೊಡುವವರು ಇದ್ದಾರೆ ಎಂದರೆ ಸರಿ.

15. ನಾನು ಬೆಂಗಳೂರಿನಲ್ಲಿದ್ದಾಗ ನನ್ನ ತಾಯಿಯ ಸಾವಿನ ವಿಚಾರ ತಿಳಿದು ಊರಿಗೆ ಬಂದಾಗ, ಪೊಲೀಸರು ಅಲ್ಲಿ ಇದ್ದರು ಎನ್ನುವುದು ಸರಿ. ನಾನು ಕಾರಿನಲ್ಲಿ ಬೆಂಗಳೂರಿನಿಂದ ಊರಿಗೆ ಬಂದಿದ್ದೇನೆ. ಆಗ ಪೊಲೀಸರು ನನ್ನನ್ನು ನೀವು ಯಾರು, ಮೃತ ವ್ಯಕ್ತಿ ಏನು ಸಂಬಂಧ ಎಂದು ವಿಚಾರ ಮಾಡಿದರು ಎನ್ನುವುದು ಸರಿ. ಪೊಲೀಸರು ಅಲ್ಲಿ ವಿಚಾರಣೆ ಮಾಡಿ, ಬರವಣಿಗೆ ಮಾಡುತ್ತಿದ್ದರು ಎನ್ನುವುದು ಸರಿ. ಪೊಲೀಸರು ನನ್ನ ರುಜುವನ್ನೇನು ತೆಗೆದುಕೊಳ್ಳಲಿಲ್ಲ. ಪೊಲೀಸರು ನನ್ನ ಬಳಿ ನನ್ನ ಸಂಬಂಧದ ಬಗ್ಗೆ, ನನ್ನ ಬೆಂಗಳೂರು ವಾಸದ ಬಗ್ಗೆ ಎಲ್ಲಾ ವಿಚಾರಣೆ ಮಾಡಿದರು ಎಂದರೆ ಸರಿ. ಪೊಲೀಸರು ಮೃತ ದೇಹದ ಬಳಿ ತಮ್ಮ ಕಾನೂನು ಪ್ರಕಾರ ಏನು ಕ್ರಮ ಇದೆಯೋ ಅದನ್ನು ಮಾಡುತ್ತಿದ್ದರು ಎನ್ನುವುದು

ಸರಿ. ಸುಮಾರು 2 -3 ಗಂಟೆಗಳ ಕಾಲ ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿ ಇದ್ದರು ಎಂದರೆ ಸರಿ.

16. ಎಲ್ಲಾ ಕ್ರಮ ಜರುಗಿಸಿದ ನಂತರ ರಾತ್ರಿ 11.00 ಗಂಟೆಗೆ ಶವದ ಅಂತ್ಯಕ್ರಿಯೆಯನ್ನು ಮಾಡಲಾಯಿತು. ಆ ದಿನ ಮಧ್ಯಾಹ್ನ 12.00 ಗಂಟೆಗೆ ನಾನು ಪೊಲೀಸ್ ಠಾಣೆಗೆ ದೂರು ಕೊಡಲು ಹೋಗಿದ್ದೇನೆ. ನಾನು ಬೆಂಗಳೂರಿನಿಂದ ಊರಿಗೆ ಬೆಳಿಗ್ಗೆ 10.30 ಗಂಟೆಗೆ ಬಂದಿದ್ದೇನೆ. ನಾನು ಬರುವಷ್ಟರಲ್ಲಿ ಪೊಲೀಸರು, ಊರಿನ ಹಿರಿಯರು, ಗ್ರಾಮಸ್ಥರು, ವಿದ್ಯಾವಂತರೆಲ್ಲಾ ನೆರದಿದ್ದರು ಎನ್ನುವುದು ಸರಿ.

17. ಪೊಲೀಸ್ ಠಾಣೆಗೆ ನಾನು ಮತ್ತು ಸ್ನೇಹಿತ ಹೋಗಿದ್ದೇವೆ. ಪೊಲೀಸರು ಸ್ಥಳದಲ್ಲಿಯೇ ಉಳಿದರು, ನಮ್ಮ ಜೊತೆ ಬರಲಿಲ್ಲ. ಪೊಲೀಸ್ ಇನ್ಸ್ ಪೆಕ್ಟರ್ ಸ್ಥಳದಲ್ಲಿಯೇ ಇದ್ದರು ಎನ್ನುವುದು ಸರಿ. ನನಗೆ ಅವರ ಹೆಸರು ಗೊತ್ತಿಲ್ಲ. ಅವರು ಈ ಕೇಸಿನ ತನಿಖಾಧಿಕಾರಿ ಎನ್ನುವುದು ಸರಿ. ಪೊಲೀಸರು ನಾನು ಊರಿಗೆ ಬರುವುದಕ್ಕಿಂತ ಎಷ್ಟು ಮೊದಲು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಬರುವ ಮೊದಲೇ ಊರಿನವರು ಮತ್ತು ನಮ್ಮ ಸಂಬಂಧಿಗಳು ಪೊಲೀಸರಿಗೆ ಮಾಹಿತಿ ಕೊಟ್ಟು ಪೊಲೀಸರು ಬಂದಿದ್ದರು ಎನ್ನುವುದು ಸರಿ.

18. ನಾನು ಫಿರ್ಯಾದಿಯಲ್ಲಿ ಪೊಲೀಸ್ ಇನ್ಸ್ ಪೆಕ್ಟರ್ ಗೆ ಎಂದು ಬರೆದಿದ್ದೇನೆ. ನಾನು ಊರಿನಿಂದಲೇ ಫಿರ್ಯಾದನ್ನು ಬರೆದುಕೊಂಡು ಹೋಗಿದ್ದೆ. ಫಿರ್ಯಾದು ಬರೆಯುವುದಕ್ಕೆ ಪೇಪರ್ ನಮ್ಮ ಮನೆಯಲ್ಲಿಯೇ ಇತ್ತು.

19. ನನ್ನ ತಾಯಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ವರ್ಷಕ್ಕೆ 2 /3 ತಿಂಗಳು ಊರಿನಲ್ಲಿ ಇರುತ್ತಿದ್ದರು.

20. ನನ್ನ ಅಜ್ಜಿ, ನನ್ನ ತಾಯಿ ಮೃತಪಟ್ಟ ಬಗ್ಗೆ ಬೆಂಗಳೂರಿನಲ್ಲಿದ್ದ ನನಗೆ ಫೋನ್ ಮಾಡಿ ಹೇಳಿದಾಗ, ನಾನು ಪೊಲೀಸರಿಗೆ ಫೋನ್ ಮಾಡಿ, ಈ ವಿಚಾರವನ್ನು ಹೇಳಿಲ್ಲ. ಅಷ್ಟರ ಒಳಗೆ ಊರಿನವರೇ ಪೊಲೀಸರಿಗೆ ವಿಷಯ ತಿಳಿಸಿದ್ದರು. ನನ್ನ ಅಜ್ಜಿ ನನಗೆ ಫೋನ್ ಮಾಡಿದಾಗಲೇ ಪೊಲೀಸರು ಈಗಾಗಲೇ ಸ್ಥಳಕ್ಕೆ ಬಂದಿದ್ದಾರೆ ಎಂದು ಹೇಳಿದರು. ನನ್ನ ಅಜ್ಜಿ ನನಗೆ ಫೋನ್ ಮಾಡಿ ನನ್ನ ತಾಯಿ ಮೃತಪಟ್ಟ ಬಗ್ಗೆ ತಿಳಿಸಿದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

21. ನನಗೆ ಮದುವೆ ಆಗಿದೆ. ನನ್ನ ತಾಯಿ ಮದ್ಯಪಾನ ಮಾಡುತ್ತಿದ್ದರಿಂದ ಅವರಿಗೂ ನನ್ನ ಹೆಂಡತಿಗೂ ಸರಿ ಬರುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆ ದಿನ ನಾನು ಬೆಂಗಳೂರಿನಲ್ಲಿ ಇದ್ದೆ ಎಂದು ತೋರಿಸಲು ಈಗ ನನ್ನ ಬಳಿ ದಾಖಲೆ ಇಲ್ಲ. ಆದರೆ ನಾನು ದಾಖಲೆಯನ್ನು ಹಾಜರುಪಡಿಸಬಹುದು. ಊರಿನಲ್ಲಿ ನಮಗೆ ಜಮೀನು ಇದೆ. ನಾವು ಅಡಿಕೆ ಬೆಳೆದಿದ್ದೇವೆ. ನಮ್ಮ ಅಡಿಕೆ ತೋಟದ ಮೇಲುಸ್ತುವಾರಿಯನ್ನು ನನ್ನ ಹೆಂಡತಿ ಸಂಧ್ಯಾರವರು ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ನನ್ನ ತಾಯಿ ಮತ್ತು ನನ್ನ ಹೆಂಡತಿಯ ನಡುವೆ ವಿಪರೀತ ಗಲಾಟೆ ನಡೆಯುತ್ತಿತ್ತು ಎನ್ನುವುದು ಸುಳ್ಳು.

22. ಆ ದಿನ ನನ್ನ ಹೆಂಡತಿ ಮತ್ತು ನನ್ನ ತಾಯಿಯ ನಡುವೆ ವಿಪರೀತ ಗಲಾಟೆ ಆಗಿ, ನನ್ನ ಹೆಂಡತಿ ನನ್ನ ತಾಯಿಯನ್ನು ಗಲಾಟೆ ಮಾಡಿ ಮನೆಯಿಂದ ಹೊರಗೆ ಹಾಕಿದರು ಎನ್ನುವುದು ಸುಳ್ಳು.

23. ಆರೋಪಿ ಮತ್ತು ನನ್ನ ತಾಯಿ ಜಗಳ ಮಾಡಿಕೊಳ್ಳುತ್ತಾ ಮನೆಯಿಂದ ಆಂಜನೇಯಸ್ವಾಮಿ ದೇವಸ್ಥಾನದ ಕಡೆಗೆ ಹೋದರು ಎಂದು ನನಗೆ ಊರಿನವರು ತಿಳಿಸಿದರು ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನೌಕರಿ ಹೊಂದಿದ್ದು, ಜಮೀನು ಸಹಾ ಇರುವುದರಿಂದ ಆರ್ಥಿಕವಾಗಿ ಚೆನ್ನಾಗಿದ್ದೇನೆ ಎನ್ನುವುದು ಸರಿ. ಆರೋಪಿ ವಗ್ಗಯ್ಯ ಕೂಲಿ ಕೆಲಸ ಮಾಡುವವರು ಎನ್ನುವುದು ಸರಿ.

24. ಯಾರಿಂದಲಾದರೂ ಹಣ ಪಡೆದರೆ ಅದನ್ನು ಮರಳಿ ಕೊಡುವ ಸಂಸ್ಕಾರ ನನಗೆ ಇದೆ ಎನ್ನುವುದು ಸರಿ. ನನ್ನ ತಾಯಿ ಆರ್ಥಿಕವಾಗಿ ಚೆನ್ನಾಗಿ ಇದ್ದರು ಎನ್ನುವುದು ಸರಿ. ನನ್ನ ಒಬ್ಬ ಸಹೋದರಿಯ ಗಂಡ ಬೆಂಗಳೂರಿನಲ್ಲಿ ಮತ್ತು ಇನ್ನೊಬ್ಬ ಸಹೋದರಿಯ ಗಂಡ ದಾವಣಗೆರೆಯಲ್ಲಿ ಒಳ್ಳೆಯ ಕೆಲಸದಲ್ಲಿ ಇದ್ದಾರೆ. ನನ್ನ ತಾಯಿಗೆ ಹಣಕಾಸಿನ ಅವಶ್ಯಕತೆ ಇದ್ದರೆ ನಾನು ಸಹಾಯ ಮಾಡುತ್ತಿದ್ದೆ ಎನ್ನುವುದು ಸರಿ. ನಮಗೆ ಒಂದು ಎಕರೆ ಅಡಿಕೆ ತೋಟ ಇದೆ, ಅದರಲ್ಲಿ ಈಗ ಆದಾಯ ಬರುತ್ತಿದೆ. ಅದರ ಆದಾಯವನ್ನು ನಾನೇ ತೆಗೆದುಕೊಳ್ಳುತ್ತೇನೆ.

25. ನನ್ನ ತಾಯಿ ಆರೋಪಿಯಿಂದ ರೂ.4,000/-ಗಳನ್ನು ತೆಗೆದುಕೊಂಡಿದ್ದರ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ಆ ರೀತಿ ಯಾವ ದಿನಾಂಕ, ತಿಂಗಳು, ವರ್ಷ ಈ ಹಣವನ್ನು ನನ್ನ ತಾಯಿ ಆರೋಪಿಯಿಂದ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ.

ಆರೋಪಿಯಿಂದ ನನ್ನ ತಾಯಿ ರೂ.4,000/-ಗಳನ್ನು ತೆಗೆದುಕೊಂಡಿರಲಿಲ್ಲ ಎನ್ನುವುದು ಸರಿಯಲ್ಲ.

26. ನನ್ನ ತಾಯಿಯ ಮೈ ಮೇಲೆ ಆಗಿರುವ ನಾನು ಹೇಳಿರುವಂತಹ ಗಾಯಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ನಾನು 2016 ರಲ್ಲಿ ಕೆಲಸಕ್ಕೆ ಸೇರಿದ್ದೇನೆ. 2016 ರಲ್ಲಿಯೇ ನನ್ನ ತಂದೆ ಮೃತಪಟ್ಟಿದ್ದು. 2016 ರಿಂದ 2022 ರವರೆಗೆ ನಾನು ಆರೋಪಿಯನ್ನು ನನ್ನ ಜಮೀನಿನ ಕೂಲಿ ಕೆಲಸಕ್ಕೆ ಇಟ್ಟುಕೊಂಡಿದ್ದೆ ಎನ್ನುವುದು ಸರಿಯಲ್ಲ.

27. 2022 ರಲ್ಲಿ ನಾನು ಆರೋಪಿಗೆ ಕೆಲಸ ಬಿಡುವಂತೆ ಹೇಳಿದಾಗ ಆರೋಪಿ ತಾನು 2016 ರಿಂದ 2022 ರವರೆಗೆ ಕೆಲಸ ಮಾಡಿದ್ದರ ಬಗ್ಗೆ ತನಗೆ ಏನಾದರೂ ಕೊಡುವಂತೆ ನಾನು ಊರಿಗೆ ಬಂದಾಗಲೆಲ್ಲಾ ಆರೋಪಿ ನನಗೆ ಪೀಡಿಸುತ್ತಿದ್ದರು ಎನ್ನುವುದು ಸುಳ್ಳು.

28. ನಾನು ಆಗಾಗ ಊರಿಗೆ ಬರುತ್ತಿದ್ದೆ ಎನ್ನುವುದು ಸರಿ. ನಾನು, ಆರೋಪಿ ನನಗೆ ಕೊಡುತ್ತಿದ್ದ ಕಾಟ ತಾಳಲಾರದೆ ನನ್ನ ಸಂಬಂಧಿಗಳ ಬಳಿ ಇವನು ನನಗೆ ಬಿಡುವುದಿಲ್ಲ ಏನಾದರೂ ಮಾಡಿ ಹಾಕಿ ಎಂದು ಹೇಳುತ್ತಿದ್ದೆ ಎನ್ನುವುದು ಸರಿಯಲ್ಲ. ನಾನು ಆರೋಪಿಗೆ ಒಂದೆರಡು ಸಲ ನನ್ನ ಬಳಿ ಬರದಂತೆ ದೂಕಿದ್ದು ಮತ್ತು ಕೆನ್ನೆಗೆ ಹೊಡೆದಿದ್ದು ಇದೆ ಎನ್ನುವುದು ಸುಳ್ಳು.

29. ನನ್ನ ತಾಯಿ ಮೃತಪಟ್ಟಿದ್ದರ ಲಾಭ ಪಡೆದು ಅಲ್ಲೇ ಇದ್ದ ಆರೋಪಿಯ ಮೇಲೆ ಸುಳ್ಳು ದೂರನ್ನು ಪೊಲೀಸರ ಜೊತೆ ಶಾಮೀಲಾಗಿ ಕೊಟ್ಟಿದ್ದೇನೆ ಎನ್ನುವುದು ಸುಳ್ಳು. ಆರೋಪಿಯನ್ನು ಆ ದಿನ ಬೆಳಗಿನ ಜಾವವೇ ಅರೆಸ್ಟ್ ಮಾಡಿ ಪೊಲೀಸರು ಕರೆದುಕೊಂಡು ಹೋಗಿದ್ದರು. ನಾನು ಆರೋಪಿಯನ್ನು ಠಾಣೆಯಲ್ಲೂ ನೋಡಲಿಲ್ಲ.

30. ನಾನು ಸಿಸಿ ಕ್ಯಾಮರಾದಲ್ಲಿ ಘಟನೆಯನ್ನು ನೋಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಸಿಸಿ ಕ್ಯಾಮರಾದಲ್ಲಿ ನೋಡಿದ್ದೇನೆಂದು ಹೇಳುವ ಘಟನೆ ಸುಳ್ಳು ಸೃಷ್ಟಿ ಮಾಡಿದ್ದು ಎನ್ನುವುದು ಸರಿಯಲ್ಲ.

31. ಈಗ ಪ್ಲೇ ಮಾಡಿ ತೋರಿಸಿರುವ ನಿ.ಪಿ.9 ರ ಪೆನ್ ಡ್ರೈವ್ ನಲ್ಲಿ ಇರುವ ವೀಡಿಯೋನಲ್ಲಿ ಗಂಡ - ಹೆಂಡತಿ ಬ್ಯಾಗ್ ಗಳನ್ನು ಹಾಕಿಕೊಂಡು ಬಸ್ ಸ್ಟ್ಯಾಂಡ್ ಅಥವಾ ಸಾರ್ವಜನಿಕ ಪ್ರದೇಶದ ಕಡೆ ಬರುತ್ತಿರುವಂತೆ ಕಾಣುತ್ತದೆ ಎನ್ನುವುದು ಸರಿಯಲ್ಲ. ಆ

ಫೋಟೋದಲ್ಲಿ ಕಾಣುವ ವ್ಯಕ್ತಿಗಳು ಗಂಡ-ಹೆಂಡತಿಯರಾಗಿ ಅಥವಾ ಒಟ್ಟೊಟ್ಟಿಗೆ ಇರುವವರು ಮದ್ಯಪಾನ ಮಾಡಿ ಊರುರು ಅಡ್ಡಾಡುತ್ತಾ ಇರುವವರಂತೆ ಕಾಣುತ್ತಾರೆ ಎನ್ನುವುದು ಸರಿಯಲ್ಲ. ಆ ವೀಡಿಯೋದಲ್ಲಿ ಅದು ರಾತ್ರಿಯ ಸಮಯ ಎಂದು ಗೊತ್ತಾಗುತ್ತದೆ ಎನ್ನುವುದು ಸರಿ.

32. ನಾನು ಊರಿಗೆ ಬಂದ ಮೇಲೆ ಸ್ಥಳದಲ್ಲಿಯೇ ಇದ್ದ ಪೊಲೀಸ್ ಇನ್ಸ್ ಪೆಕ್ಟರ್ ರವರಿಗೆ ಅಲ್ಲಿಯೇ ದೂರು ಬರೆದು ಕೊಡುವ ಪ್ರಯತ್ನವನ್ನು ನಾನು ಮಾಡಿಲ್ಲ. ಆ ರೀತಿ ಕೊಡುವುದಕ್ಕೆ ಯಾವುದೇ ತೊಂದರೆ ಇರಲಿಲ್ಲ ಎನ್ನುವುದು ಸರಿ. ಆ ದಿನ ಸಂಜೆ 7.00 ಗಂಟೆಯ ನಂತರ ಪೊಲೀಸರು ಸಿದ್ಧಪಡಿಸಿದ ದೂರಿಗೆ ನಾನು ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

33. ನಿ.ಪಿ.9 ರಲ್ಲಿ ಕಾಣುವ ಘಟನೆ ನನ್ನ ಸಮಕ್ಷಮ ನಡೆದಿರುವ ಘಟನೆ ಅಲ್ಲ ಎನ್ನುವುದು ಸರಿ. ನಾನು ಎ ಐ ತಂತ್ರಜ್ಞಾನದ ಬಗ್ಗೆ ಕೇಳಿದ್ದೇನೆ. ಈ ತಂತ್ರಜ್ಞಾನದಲ್ಲಿ ವ್ಯಕ್ತಿಯ ಚಹರೆಗಳನ್ನೇ ಬದಲಿಸಬಹುದು ಎನ್ನುವುದು ಸರಿ. ಯವುದು ಸಹಜವಾದದ್ದು ಮತ್ತು ಯಾವುದೇ ಎ ಐ ತಂತ್ರಜ್ಞಾನದ ಮೂಲಕ ಸೃಷ್ಟಿಸಿದ್ದು ಎಂದು ನನಗೆ ಗುರುತಿಸಲಾಗುವುದಿಲ್ಲ ಎನ್ನುವುದು ಸರಿ. ನಾವು ವಿದ್ಯಾವಂತರಾಗಿದ್ದರಿಂದ ನಮ್ಮ ತಾಯಿಗೆ ರಾತ್ರಿ ಹೊತ್ತು ಬೇರೆಯವರ ಜೊತೆ ಹೊರಗಡೆ ಅಡ್ಡಾಡುವುದಕ್ಕೆ ಬಿಡುತ್ತಿರಲಿಲ್ಲ ಎನ್ನುವುದು ಸರಿ. ಕುಟುಂಬದ ಪುರುಷ ಸದಸ್ಯನಾಗಿ ನನ್ನ ಹೆಂಡತಿ, ತಾಯಿ ಮತ್ತು ಸಹೋದರಿಯ ಮೇಲೆ ನನಗೆ ಕಾಳಜಿ ಇದೆ ಎನ್ನುವುದು ಸರಿ. ರಾತ್ರಿ ಸಮಯದಲ್ಲಿ ಮಹಿಳೆ, ಪರ ಪುರುಷನ ಜೊತೆ ಓಡಾಡುವುದು ಸರಿಯಲ್ಲವೆಂದು ನನಗೆ ಗೊತ್ತಿದೆ ಎನ್ನುವುದು ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲನ್ನು ನಿ.ಪಿ.9-ಸಿಸಿ ಕ್ಯಾಮರಾ ರೆಕಾರ್ಡಿಂಗನ್ನು ಪೂರ್ತಿ ನೋಡಿ ಮಾಡಬೇಕಾಗುವುದಾಗಿ ತಿಳಿಸಿದ್ದು, ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

Sd/-04-07-2026
(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ /-

ದಿನಾಂಕಃ **04-07-2026** ರಂದು ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**(further cross-examination is recorded by way of In camera proceedings, as display of CC Camera recordings is involved)**

**(Accused produced from J.C. through V.C. at the remote point of District Prison, Chikkamagaluru)**

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ವಿಸಿಯಲ್ಲಿ ಹಾಜರುಪಡಿಸಿದ್ದು, ನ್ಯಾಯಾಲಯದಿಂದ ಮಾತನಾಡುವುದು ಅಂದರೆ ಸಾಕ್ಷಿದಾರರು ಹೇಳುವುದನ್ನು ಸಹಾ ಕೇಳಿಸಿಕೊಂಡು, ಕೇಳಿಸುತ್ತಿದೆಯೇ ಎಂದು ಆರೋಪಿಗೆ ಕೇಳಲಾಗಿ ಎಲ್ಲವೂ ಕೇಳಿಸುತ್ತಿದೆ ಎಂದು ಹೇಳಿರುತ್ತಾನೆ)

ಮುಂದುವರಿದ ಪಾಟೀ ಸವಾಲುಃ ಶ್ರೀ ಪಿ ಇ ಎಸ್ ವಕೀಲರಿಂದಃ

34. ನಿ.ಪಿ. 9 ರ ಸಿಸಿ ಕ್ಯಾಮರಾ ರೆಕಾರ್ಡಿಂಗ್ ನಲ್ಲಿ ಈಗ ನ್ಯಾಯಾಲಯದಲ್ಲಿ ಪ್ಲೇ ಮಾಡಿ ತೋರಿಸಿಲಾಗಿದ್ದು, ಈ ರೆಕಾರ್ಡಿಂಗ್ ನಲ್ಲಿ ಒಬ್ಬ ಮಹಿಳೆಗೆ ಒಬ್ಬ ಪುರುಷ ಹೊಡೆದಿದ್ದು ಕಂಡು ಬರುತ್ತದೆ. ಈ ರೀತಿ ಹೊಡೆದ ನಂತರವೂ ಆ ಮಹಿಳೆ ಎದ್ದು ಓಡಾಡಿರುವುದು ಈ ರೆಕಾರ್ಡಿಂಗ್ ನಲ್ಲಿ ಕಾಣುತ್ತದೆ ಎನ್ನುವುದು ಸರಿ. ಆ ಮಹಿಳೆ ಒಂದು ಸ್ವೆಟರ್ ಹಾಕಿರುವುದು ಕಾಣುತ್ತದೆ ಎನ್ನುವುದು ಸರಿ. Steps ಹತ್ತುವಲ್ಲಿ ಚಪ್ಪಲಿ ಇರುವುದು ಕಾಣುತ್ತದೆ ಎನ್ನುವುದು ಸರಿ. ಆ ಚಪ್ಪಲಿ ಯಾರದು ಎಂದು ನನಗೆ ಗೊತ್ತಿಲ್ಲ. ಆ ಮಹಿಳೆ ಹಾಕಿರುವ ಸ್ವೆಟರ್ ಸಿಮೆಂಟ್ ಬಣ್ಣದ ಸ್ವೆಟರ್ ಇರಬಹುದು.

35. ನನ್ನ ಪತ್ನಿ ಧರಿಸುವ ಬಟ್ಟೆಯ ಬಗ್ಗೆ ನನಗೆ ಗೊತ್ತಿರುತ್ತದೆ ಎನ್ನುವುದು ಸರಿ. ಈ ರೆಕಾರ್ಡಿಂಗ್ ನಲ್ಲಿ ಆ ವ್ಯಕ್ತಿಗಳು ಧರಿಸಿದ್ದ ಬಟ್ಟೆಯ ಬಣ್ಣ ಸರಿಯಾಗಿ ಕಾಣುತ್ತಿಲ್ಲ ಎನ್ನುವುದು ಸರಿಯಲ್ಲ. ಈ ಸಿಸಿ ಕ್ಯಾಮರಾ ರೆಕಾರ್ಡಿಂಗ್ ನಲ್ಲಿ ಅಲ್ಲಿದ್ದ ಮಹಿಳೆಯ ಮತ್ತು ಪುರಷನ ರೂಪ ಮತ್ತು ಧರಿಸಿದ್ದ ಬಟ್ಟೆಗಳು ಸ್ಪಷ್ಟವಾಗಿ ಕಾಣುವುದಿಲ್ಲ ಎನ್ನುವುದು ಸರಿಯಲ್ಲ. ಆ ವ್ಯಕ್ತಿ ನೋಡುವುದಕ್ಕೆ ಟಾರ್ಚ್ ಉಪಯೋಗಿಸುತ್ತಿರುವುದು ಕಾಣುತ್ತದೆ ಎನ್ನುವುದು ಸರಿ.

36. ದಿನಾಂಕಃ 18-03-2024 ರಂದು ನಾನು ಈ ರೆಕಾರ್ಡಿಂಗ್ ವೀಡಿಯೋವನ್ನು ಪೊಲೀಸ್ ಠಾಣೆಯಲ್ಲಿ ನೋಡಿದ ಬಗ್ಗೆ ಆ ದಿನ ಪೊಲೀಸ್ ಠಾಣೆಗೆ ಬಂದ ಬಗ್ಗೆ ದಾಖಲೆ ನನ್ನ ಬಳಿ ಇದೆ. ಆ ದಿನ ನಾನು ರಜೆ ಹಾಕಿ ಬಂದಿದ್ದೆ.

37. ನನಗೆ ಇದಕ್ಕೂ ಹಿಂದೆ ನ್ಯಾಯಾಲಯದಿಂದ ಸಮನ್ಸ್ ಯಾವಾಗ ಬಂದಿತ್ತು ಎಂದು ದಿನಾಂಕ ನೆನಪಿಲ್ಲ. ಚಾಸಾ-5-ಭೀಮಾನಾಯಕ್, ಚಾಸಾ-7- ವಿಕಾಸ್ ನಾಯಕ್, ಚಾಸಾ-8-ರವಿ ನಾಯಕ್ ನನ್ನ ಸಂಬಂಧಿಕರು. ಚಾಸಾ-9- ಸಚಿನ್ ನನ್ನ ಸಂಬಂಧಿಕರಲ್ಲ. ಚಾಸಾ-10-ಚೇತನ್ ನಾಯಕ್ ನನಗೆ ಗೊತ್ತಿಲ್ಲ. ಚಾಸಾ-11- ನಟರಾಜ್ ನಾಯಕ್ ನಮ್ಮ ಜಾತಿಯವರು ಮತ್ತು ನಮ್ಮ ಊರಿನವರು, ಸಂಬಂಧಿಯಲ್ಲ. ಚಾಸಾ-13-ಮೋಹನ್ ಕುಮಾರ್ ನನ್ನ ಪರಿಚಯಸ್ಥರು. ಚಾಸಾ-14 ನನ್ನ ಅಜ್ಜಿ. ಚಾಸಾ-15 ಮತ್ತು 18 ನನ್ನ ಅಕ್ಕಂದಿರು. ಚಾಸಾ-16 ನನ್ನ ಮಾವನ ಹೆಂಡತಿ. ಚಾಸಾ-17 ನನ್ನ ಸಂಬಂಧಿಕರು. ಚಾಸಾ-19 ನನ್ನ ಭಾವ. ಈ ಎಲ್ಲಾ ಸಾಕ್ಷಿದಾರರು ಇರುವ ಊರು ನಮ್ಮ ಊರಿನ ಹತ್ತಿರವೇ ಇದೆ ಎಂದರೆ ಸರಿ. ಚಾಸಾ-2 ಜಿತೇಂದ್ರ ಸಿಂಗ್ ನಾಯಕ್ ನನಗೆ ಗೊತ್ತಿಲ್ಲ.

38. ನಮ್ಮ ಮನೆಯಿಂದ ಸಖರಾಯಪಟ್ಟಣ 3 ಕಿ ಮೀ ದೂರ ಆಗುತ್ತದೆ. ಚಾಸಾ-2 ರವರ ತಂದೆ ಹೆಸರು ನರಸಿಂಗ್ ನಾಯಕ್ ಎನ್ನುವುದು ಸರಿ. ಅವರು ನನಗೆ ದೂರದ ಸಂಬಂಧಿ ಎಂದರೆ ನನಗೆ ಗೊತ್ತಿಲ್ಲ. ಅವರು ನನ್ನ ಸಂಬಂಧಿಗಳಾಗಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

39. ನಿ.ಪಿ.9 ರ ವೀಡಿಯೋವನ್ನು ಕೇಸಿಗೋಸ್ಕರ ಪೊಲೀಸರ ಜೊತೆ ಸೇರಿ ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ. ವೀಡಿಯೋದಲ್ಲಿ ಕಂಡು ಬರುವ ವ್ಯಕ್ತಿಗಳು ನನ್ನ ತಾಯಿಯೂ ಅಲ್ಲ, ಈ ಕೇಸಿನ ಆರೋಪಿಯೂ ಅಲ್ಲ ಎನ್ನುವುದು ಸರಿಯಲ್ಲ. ದೇವಸ್ಥಾನದ ಸುತ್ತಾಮುತ್ತಾ ಮರಗಳಿವೆ ಎನ್ನುವುದು ಸರಿ. ದೇವಸ್ಥಾನದಿಂದ 10 ಮೀಟರ್

ದೂರದಲ್ಲಿ ವಾಸದ ಮನೆಗಳು ಇವೆ ಎನ್ನುವುದು ಸರಿಯಲ್ಲ. ಈ ದೇವಸ್ಥಾನದಿಂದ ಸುಮಾರು 1 ಕಿ.ಮೀ. ದೂರಕ್ಕೆ ವಾಸದ ಮನೆಗಳಿವೆ. ನನ್ನ ತಾಯಿಯ ಸಾವಿಗೆ ಆರೋಪಿ ಕಾರಣನಲ್ಲದಿದ್ದರೂ ಸಹಾ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

40. ನಿ.ಪಿ.9 ರ ವೀಡಿಯೋದಲ್ಲಿ ಇಬ್ಬರೂ ವ್ಯಕ್ತಿಗಳು ಮದ್ಯಪಾನ ಮಾಡಿ ತೂರಾಡುತ್ತಿರುವಂತೆ ಕಾಣುತ್ತಿದೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-04-07-2026
(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿ:-
ಚ

Visit **ecourts.gov.in** for updates or download mobile app “**eCourts Services**” from Android or iOS